**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಸಿ.ಸಿ 1367/2022**

**ಡಿ.ಡಬ್ಲ್ಯೂ -1**

| | |
|---|---|
| ಹೆಸರು | ಶ್ರೀನಿವಾಸ್ |
| ತಂದೆಯ ಹೆಸರು | ನಾರಾಯಣಸ್ವಾಮಿ |
| ವಯಸ್ಸು | ಸುಮಾರು 36 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ದೊಡ್ಡಬಳ್ಳಾಪುರ |

**ದಿನಾಂಕಃ 11.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದ**

ನಾನು ಮತ್ತು ಪಿರ್ಯಾದಿದಾರರು ಒಂದೇ ಊರಿನವರು. ನಾನು 9 ನೇ ತರಗತಿಯವರಗೂ ವಿದ್ಯಾಭಾಸ ಮಾಡಿರುತ್ತೇನೆ. ನಾನು ಕನ್ನಡದಲ್ಲಿ ಸಹಿ ಮಾಡುತ್ತೇನೆ. ಬ್ಯಾಂಕಿನ ಎಲ್ಲಾ ವ್ಯವಹಾರಗಳಲ್ಲಿಯೂ ಸಹ ಕನ್ನಡದಲ್ಲಿ ಸಹಿ ಮಾಡುತ್ತೇನೆ. ನನ್ನ ಮತ್ತು ಪಿರ್ಯಾದಿದಾರರು ಮನೆಗೂ ಸುಮಾರು 300 ಮೀಟರ್ ಗಳ ಅಂತರವಿರುತ್ತದೆ. ನನ್ನ ಮತ್ತು ಪಿರ್ಯಾದಿದಾರರು ಮದ್ಯೆ ಯಾವುದೇ ಹಣದ ವ್ಯವಹಾರಗಳು ಆಗಿರುವುದಿಲ್ಲ.

ನಿಪಿ-1 ನನ್ನದೆ ಚೆಕ್ಕಾಗಿರುತ್ತದೆ ಹಾಗೂ ಅದು ಕಳೆದು ಹೋದ ಬಗ್ಗೆ ದೂರನ್ನೂ ಸಹ ನೀಡಿರುತ್ತೇನೆ. ಅದರ ಬಗ್ಗೆ ದೊಡ್ಡಬಳ್ಳಾಪುರದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರನ್ನಾ ಸಹ ನೀಡಿರುತ್ತೇನೆ ಹಾಗೂ ನನ್ನ ಖಾತೆಯೂ ಸಹ ಮುಚ್ಚಿ ಹೋಗಿರುತ್ತದೆ.

ಪಾಲನಜೋಗಿಹಳ್ಳಿಯಲ್ಲಿ ಇರುವ ನನ್ನ ಖಾತೆಯನ್ನು 2006 ರಲ್ಲಿ ತೆರದಿದ್ದು ನಂತರ 2011 ರಲ್ಲಿ ಖಾತೆಯನ್ನು ಮುಚ್ಚಿರುತ್ತೇನೆ. ಮುಚ್ಚಿದ ಖಾತೆಗೆ ಸಂಬಂಧಿಸಿದ ಖಾತಾ ಪುಸ್ತಕ ಮತ್ತು ಚೆಕ್ಕು ಪುಸ್ತಕಗಳನ್ನು ಬ್ಯಾಂಕಿನವರಿಗೆ ಹಿಂದಿರುಗಿ ನೀಡಿರುತ್ತೇನೆ.

ನಾನು ಪಿರ್ಯಾದಿದಾರರು ಬಳಿ 2016 ರ ಅಕ್ಟೋಬರ್ ತಿಂಗಳಲ್ಲಿ ರೂ.3,00,000/- ಗಳನ್ನು ಸಾಲವನ್ನಾಗಿ ಪಡೆದಿರುವುದಿಲ್ಲ ಹಾಗೂ ನನ್ನ ಮತ್ತು ಅವರ ಮದ್ಯೆ ಯಾವುದೇ ಹಣದ ವ್ಯವಹಾರಗಳು ಇರಲಿಲ್ಲ. ನನಗೆ ಯಾವುದೇ ನೋಟಿಸ್ ಬಂದಿರುವುದಿಲ್ಲ, ಪೊಲೀಸರು ನನಗೆ ಕರೆ ಮಾಡಿ ನನ್ನ ವಿರುದ್ದ ವಾರಂಟ್ ಆಗಿರುವ ಬಗ್ಗೆ ತಿಳಿಸಿದಾಗಲೇ ನನಗೆ ಈ ಪ್ರಕರಣದ ಬಗ್ಗೆ ಗೊತ್ತಾಗಿರುತ್ತದೆ. ನಂತರ ವಕೀಲರ ಮೂಲಕ ಹಾಜರಾಗಿ ಜಾಮೀನನ್ನು ಪಡೆದಿರುತ್ತೇನೆ. ನಾನು ಪಿರ್ಯಾದಿದಾರರರಿಂದ ಯಾವುದೇ ಹಣವನ್ನು ತೆಗೆದುಕೊಂಡಿರುವುದಿಲ್ಲ.

ನನ್ನ ಮತ್ತು ಪಿರ್ಯಾದಿದಾರರು ನಡುವೆ ಸಣ್ಣ ಪುಟ್ಟ ಜಗಳು ಆಗುತ್ತಿದ್ದವು. ಪಿರ್ಯಾದಿದಾರರು ಅವರ ಅಂಗಡಿಯಲ್ಲಿ ಮದ್ಯವನ್ನು ಮಾರಾಟ ಮಾಡುತ್ತಿದ್ದು ಅದರ ಬಗ್ಗೆ ಹಲವಾರು ಬಾರಿ ನಾನು ಅಬಕಾರಿ ಇಲಾಖೆಗೆ ದೂರನ್ನೂ ಸಹ ನೀಡಿರುತ್ತೇನೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಮದ್ಯೆ ಜಗಳ ಆಗಿರುತ್ತವೆ, ಆ ಕಾರಣಕ್ಕೆ ನನ್ನ ಚೆಕ್ಕು ದುರುಪಯೋಗಪಡಿಸಿಕೊಂಡಿರುತ್ತಾರೆ.

**<u>ಪಾಟೀ ಸವಾಲುಃ</u> ಪಿರ್ಯಾದುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ .**